## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿಂದಗಿ

**ಸಿ.ಸಿ.ನಂ.743/2019**

**ಫಿರ್ಯಾದಿದಾರ ಃ** ಸರ್ಕಾರದ ಪರವಾಗಿ
ದೇವರ ಹಿಪ್ಪರಗಿ ಪೋಲೀಸ್‌ರು

**ವಿರುದ್ಧ**

**ಆರೋಪಿತರು ಃ** 1. ರಿಯಾಜ ದಾವಲಸಾಬ ತಾಳಿಕೋಟಿ
ಸಾಃ ಕೊಕಟನೂರ, ತಾಃ ಸಿಂದಗಿ

- - -

**ಆರೋಪಣೆ**

ಶ್ರೀ.ರಮೇಶ ಗಾಣಿಗೇರ., **ಬಿ.ಕಾಂ., ಎಲ್.ಎಲ್.ಎಮ್., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿಂದಗಿ** ಆದ ನಾನು, ಈ ಮೂಲಕ

1. ರಿಯಾಜ ದಾವಲಸಾಬ ತಾಳಿಕೋಟಿ

- - - -

**ಆರೋಪಿತನಾದ ನಿನ್ನ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ ಃ**

1. ದೇವರ ಹಿಪ್ಪರಗಿ ಪೋಲಿಸ್ ಠಾಣೆಯ ಹದ್ದಿನ ಪೈಕಿ ವಿಜಯಪೂರ-ಕಲಬುರ್ಗಿ ಎನ್ ಎಚ್ 218 ರಸ್ತೆಯಲ್ಲಿ ದೇವರ ಹಿಪ್ಪರಗಿಯಿಂದ ಪೂರ್ವಕ್ಕೆ 4 ಕಿ ಮಿ ಅಂತರದಲ್ಲಿ ಬಂಗಾರೆವ್ವ ಗಂಡ ನಾಗಲಿಂಗಪ್ಪ ಪಾಟೀಲ ಸಾ ಃ ಬಮ್ಮನಜೋಗಿ ಇವರ ಜಮೀನಿನ ಹತ್ತಿರ ದಿನಾಂಕ 29-07-2019 ರಂದು ರಾತ್ರಿ 11.30 ಗಂಟೆಗೆ ಮೃತ ಮಾರುವ ತಂದೆ ಬಾಲಚಂದ್ರ ಬಿಸ್ಸೆ ಇವರು ತನಗೆ ಸೇರಿದ ಗೂಡ್ಸ ಟಾಟಾ ಏಸ ಸಂಖ್ಯೆ ಕೆಎ/28/ಎ/6348 ನೇದ್ದನ್ನು ಮಳೆ ಬರುತ್ತಿದ್ದಾಗ ರಸ್ತೆಯ ಎಡದಂತೆಗೆ ಇಂಡಿಕೇಟರ ಹಚ್ಚಿ ನಿಲ್ಲಿಸಿ ಕಾಲು ಮಡಿಯಲು ಇಳಿದು ಬರುತ್ತಿದ್ದಾಗ ಹಾಗೂ ಟಾಟಾ ಏಸನಲ್ಲಿ ಕುಳಿತಿದ್ದ ತನ್ನ ಮಕ್ಕಳಿಗೆ ನೀರು ಸಿಡಿಯುತ್ತಿದ್ದೆ ಅಂತಾ ಟಾಟಾ ಏಸ್ ವಾಹನದ ಹಿಂದಿನ ತಾಡಪತ್ರಿ ಹಾಕುತ್ತಿದ್ದಾಗ ನೀವು ಆರೋಪಿ ಮೋಟಾರ್ ಸೈಕಲ್ ನಂಬರ ಎಮ್ ಎಚ್ 07/ಎ/0595 ನೇದ್ದನ್ನು ದೇವರ ಹಿಪ್ಪರಗಿ ಕಡೆಯಿಂದ ಸಿಂದಗಿ ಕಡೆಗೆ ಅತೀ ವೇಗವಾಗಿ ಮತ್ತು ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ತಾಡಪತ್ರಿ ಹಾಕುತ್ತಿದ್ದ ಮಾರುತ್ತಿ ಬಿಸ್ಸೆ ಇತನಿಗೆ ಹಾಯಿಸಿ ಅಪಘಾತಪಡಿಸಿ ಆ ಮೂಲಕ ಭಾ.ದಂ.ಸಂ.ಕಲಂ.279 ಐಪಿಸಿ ಅಡಿಯಲ್ಲಿ ದಂಡನಿಯವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುವಿರಿ.

2. ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು 1 ನೇ ಆರೋಪಿ ಮೇಲೆ ಹೇಳಿದ ಮಾರುತಿ ಬಿಸ್ಸೆ ಇವರಿಡಿಗೆ ನಿಮ್ಮ ಮೋಟಾರ್ ಬೈಕನಿಂದ ಅಪಘಾತಪಡಿಸಿದ್ದರ ಪರಿಣಾಮ ಆತನ ತಲೆಗೆ ಬಾರಿ ಒಳಪೆಟ್ಟಾಗಿ ಕಿವಿಗಳಲ್ಲಿ ರಕ್ತ ಸೋರಿ, ಬಲಗಾಲ ಮೊಣಕಾಲಿನ ಹತ್ತಿರ ಹಾಗೂ ಕೆಳಭಾಗದಲ್ಲಿ ಭಾರಿ ಗಾಯಗಳಾಗಿ ಸ್ಥಳದಲ್ಲಿ ಮರಣ ಹೊಂದಿದ್ದು ಆ ಮೂಲಕ ಭಾ.ದಂ.ಸಂ.ಕಲಂ.304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

3. ಮೂರನೆಯಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ಆರೋಪಿ ಯಾವುದೇ ಚಾಲನಾ ಪರವಾನಿಗೆ ಹೊಂದದೆ ಎಮ್ ಎಚ್ 07/ಎ/0595 ಮೋಟಾರ್ ಬೈಕನ್ನು ಚಾಲನೆ ಮಾಡಿ ಆ ಮೂಲಕ ಮೋಟಾರ್ ವಾಹನ ಕಾಯ್ದೆ ಕಲಂ.181 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋ ಪ ಎಸಗಿರುವಿರಿ.

4. ನಾಲ್ಕನೆಯಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ಆರೋಪಿ ಯಾವುದೇ ವಿಮೆ ಮಾಡಿಸದ ಎಮ್ ಎಚ್ 07/ಎ/0595 ಮೋಟಾರ್ ಬೈಕನ್ನು ಚಾಲನೆ ಮಾಡಿ ಆ ಮೂಲಕ ಮೋಟಾರ್ ವಾಹನ ಕಾಯ್ದೆ ಕಲಂ.196 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋ ಪ ಎಸಗಿರುವಿರಿ.

ಆದ್ದರಿಂದ ಮೇಲಿನ ಆಪಾದನೆಗಳ ವಿಚಾರಣೆಯು ಈ ನ್ಯಾಯಾಲಯದಿಂದ ನಡೆಯತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ः

ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯ
ಸಿಂದಗಿ

## <u>ಆಪಾದಿತರ ಹೇಳಿಕೆ</u>

ಪ್ರಶ್ನೆ 1 ಮೇಲಿನ ಆಪಾದನೆಯ ವಿವರವನ್ನು ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ತಿಳಿಯಿತೆ?

ಉತ್ತರಃ

ಪ್ರಶ್ನೆ 2 ಸದರಿ ಮೇಲಿನ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗಾಗಿ ಕ್ಲೇಮು ಮಾಡುವಿರೆ?

ಉತ್ತರ ಃ

**(ಈ ಮೇಲಿನ ಆರೋಪವನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಕೇಳಿ ಉತ್ತರ ಪಡೆದು ಸರಿ ವ ನಿಜ ಎಂದು ಪ್ರಮಾಣೀಕರಿಸುವೆನು).**

ಸ್ಥಳಃ ಸಿಂದಗಿ,
ದಿನಾಂಕಃ

ಜೆ. ಎಮ್. ಎಫ್.ಸಿ., ಸಿಂದಗಿ

**ಆಪಾದಿತನ ಸಹಿ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿಂದಗಿ**

**ಸಿ.ಸಿ.ನಂ.536/2020**

**ಫಿರ್ಯಾದಿದಾರ :** ಸರ್ಕಾರದ ಪರವಾಗಿ
ದೇವರ ಹಿಪ್ಪರಗಿ ಪೋಲೀಸ್‌ರು

**ವಿರುದ್ಧ**

**ಆರೋಪಿತರು :**
1. ಅಯ್ಯುಬಸಾಬ ತಂದೆ ರಾಜೇಸಾಬ ಮನಗೂಳಿ
ವಯಾ:29 ವರ್ಷ,ಸಾ: ಶಿವಣಗಿ,
2. ರಾಜೇಸಾಬ ತಂದೆ ಅಮೀನಸಾಬ ಮನಗೂಳಿ
ವಯಾ:58 ವರ್ಷ,ಸಾ: ಶಿವಣಗಿ,

- - -

**ಆರೋಪಣೆ**

ಶ್ರೀ.ರಮೇಶ ಗಾಣಿಗೇರ., **ಬಿ.ಕಾಂ., ಎಲ್.ಎಲ್.ಎಮ್., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿಂದಗಿ** ಆದ ನಾನು, ಈ ಮೂಲಕ

1. ಅಯ್ಯುಬಸಾಬ ತಂದೆ ರಾಜೇಸಾಬ ಮನಗೂಳಿ
2. ರಾಜೇಸಾಬ ತಂದೆ ಅಮೀನಸಾಬ ಮನಗೂಳಿ

- - - -

**ಆರೋಪಿತನಾದ ನಿನ್ನ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ :**

5. ದೇವರ ಹಿಪ್ಪರಗಿ ಪೋಲಿಸ್ ಠಾಣೆಯ ವ್ಯಾಪ್ತಿಗೆ ಬರುವ ಕಲಬುರ್ಗಿ ವಿಜಯಪೂರ ಎನ್ ಎಚ್ 50 ರಸ್ತೆಯ ಮೇಲೆ ಪಡಗಾನೂರ ಗ್ರಾಮದ ಸಿದ್ದು ಕಬ್ಬಿನ ಕಡಿ ಮಸಿನ ಹತ್ತಿರ ದಿನಾಂಕ 11-02-2020 ರಂದು ಸಾಯಂಕಾಲ 4.40 ಗಂಟೆ ಸುಮಾರಿಗೆ ನೀವು 1 ನೇ ಆರೋಪಿ ಟ್ರ್ಯಾಕ್ಟರ ನಂಬರ ಕೆಎ/28/ಟಿಬಿ/6589 ಹಾಗೂ ಟ್ರೇಲರ ನಂಬರ ಕೆಎ/28/ಟಿಸಿ/4928 ನೇದ್ದನ್ನು ಮೃತ ಮಡ್ಡಪ್ಪ ತರೆದೆ ಕಲ್ಲಪ್ಪ ಕಗ್ಗೋಡ ಇವರು ನಿಮ್ಮ ಟ್ರಾಕ್ಟರನ್ನು ಹಿಂದೆ ಹಾಕುವ ಸಲುವಾಗಿ ತಮ್ಮ ಮೋಟಾರ್ ಸೈಕಲ್ ನಂಬರ ಕೆಎ/28/ಇಎಸ್/6107 ಹೋಗುತ್ತಿದ್ದಾಗ ನೀವು 1 ನೇ ಆರೋಪಿ ಯಾವುದೇ ಸಿಗ್ನಲ್ ಅಥವಾ ಸೂಚನೆ ನೀಡದೆ ಏಕಾಏಕಿ ಜೋರಾಗಿ ವ ನಿಸ್ಕಾಳಜಿತನದಿಂದ ಟ್ರ್ಯಾಕ್ಟರ ಬಲಗಡೆ ತಿರುಗಿಸಿ ಸದರಿಯವರಿಗೆ ಅಪಘಾತಪಡಿಸಿ ಆ ಮೂಲಕ ಭಾ.ದಂ.ಸಂ.ಕಲಂ.279 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

2. ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು 1 ನೇ ಆರೋಪಿ ಮಲ್ಲಪ್ಪ ಕಲ್ಲಪ್ಪ ಕಗ್ಗೋಡ ಇವರಿಗೆ ಟ್ರ್ಯಾಕ್ಟರ ಹಾಯಿಸಿ ಅವರಿಗೆ ಸ್ಥಳದಲ್ಲಿ ತಲೆಯ

ಮೇಲೆ, ಹಣೆಯ ಮಧ್ಯದಲ್ಲಿ, ಎಡಕಿನ ಹುಬ್ಬಿನ ಹತ್ತಿರ, ಮೂಗಿನ ಮೇಲೆ, ಬಲಗೈ ಮುಷ್ಠಿಯ ಮೇಲೆ, ಬೆನ್ನಿಗೆ, ಸೊಂಟದ ಕಡೆಗೆ, ಎಡಗಾಲ ತೊಡೆಗೆ, ಎಡಕೀನ ಕಾಲು ತೊಡೆಯಲ್ಲಿ ಕಟ್ಟಾಗಿ ದೇಹದಿಂದ ಬೇರ್ಪಟ್ಟು ಬಾರಿ ಗಾಯ ಹೊಂದಿ ಸ್ಥಳದಲ್ಲಿ ಮರಣ ಹೊಂದಿದ್ದು ಆ ಮೂಲಕ ಭಾ.ದಂ.ಸಂ.ಕಲಂ.304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

3. ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು 1ಆರೋಪಿ ಸದರಿ ಮೃತ ಮಲ್ಲಪ್ಪ ಕಲ್ಲಪ್ಪ ಕಗ್ಗೋಡ ಇವರು ಚಲಾಯಿಸುತ್ತಿದ್ದ ಮೋಟಾರ್ ಬೈಕಗೆ ಡಿಕ್ಕಿಪಡಿಸಿದ್ದು ಸದರಿ ಮೋಟಾರ್ ಸೈಕಲ್ ಹಿಂದೆ ಕುಳಿತಿದ್ದ ದೂರುದಾರನಿಗೆ ಎಡಗಾಲ ಮೊಣಕಾಲಿನ ಹತ್ತಿರ ತೀವ್ರ ಸ್ವರೂಪದ ಗಾಯವಾಗಿ ಆ ಮೂಲಕ ಭಾ.ದಂ.ಸಂ.ಕಲಂ.338 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋ ಪ ಎಸಗಿರುವಿರಿ.

4. ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು 1 ಆರೋಪಿ ಸದರಿ ಅಪಘಾತ ಮಾಡಿ ಟ್ರ್ಯಾಕ್ಟರನ್ನುಸ್ಥಳದಲ್ಲಿಯೇ ಬಿಟ್ಟು ಅಪಘಾತದ ಸಂಗತಿಯನ್ನು ಪೋಲಿಸ್ ಠಾಣೆಗೆ ತಿಳಿಸದೇ ಓಡಿ ಹೋಗಿ ಆ ಮೂಲಕ ಭಾರತೀಯ ಮೋಟಾರ್ ವಾಹ ನ ಅಧಿನಿಯಮ ಕಲಂ.187 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋ ಪ ಎಸಗಿರುವಿರಿ.

5. ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು 2 ನೇ ಆರೋಪಿ, ಆರೋಪಿ 1 ರವರಿಗೆ ವಿಮಾ ಪತ್ರವಿಲ್ಲದ ಮೇಲೆ ಹೇಳಿದ ಟ್ರ್ಯಾಕ್ಟರ ಮತ್ತು ಟೇಲರನ್ನು ಚಲಾಯಿಸಲು ನೀಡಿ ಆ ಮೂಲಕ ಭಾರತೀಯ ಮೋಟಾರ್ ವಾಹ ನ ಅಧಿನಿಯಮ ಕಲಂ.196 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋ ಪ ಎಸಗಿರುವಿರಿ.

ಆದ್ದರಿಂದ ಮೇಲಿನ ಆಪಾದನೆಗಳ ವಿಚಾರಣೆಯು ಈ ನ್ಯಾಯಾಲಯದಿಂದ ನಡೆಯತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 07-08-2021

ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯ

ಸಿಂದಗಿ

## <u>ಆಪಾದಿತರ ಹೇಳಿಕೆ</u>

ಪ್ರಶ್ನೆ 1 ಮೇಲಿನ ಆಪಾದನೆಯ ವಿವರವನ್ನು ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ತಿಳಿಯಿತೆ?

ಉತ್ತರಃ 1 2

ಪ್ರಶ್ನೆ 2 ಸದರಿ ಮೇಲಿನ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗಾಗಿ ಕ್ಲೇಮು ಮಾಡುವಿರೆ?

ಉತ್ತರ ಃ 1 2

(ಈ ಮೇಲಿನ ಆರೋಪವನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಕೇಳಿ ಉತ್ತರ ಪಡೆದು ಸರಿ ವ ನಿಜ ಎಂದು ಪ್ರಮಾಣೀಕರಿಸುವೆನು).

ಸ್ಥಳಃ ಸಿಂದಗಿ,
ದಿನಾಂಕಃ07-08-2021

ಜೆ. ಎಮ್. ಎಫ್.ಸಿ., ಸಿಂದಗಿ

**ಆಪಾದಿತನ ಸಹಿ**